S.C. 53/2024.

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.

**<u>ಸತ್ರ ಮೊಕದ್ದಮೆ ಸಂಖ್ಯೆ: 53/2024.</u>**

| | | | |
|---|---|---|---|
| ಹೆಸರು | : | ಗೂಳಪ್ಪ ಗುಗ್ಗರಿ | ಫ್ರಾಸಾ-09 |
| ತಂದೆಯ ಹೆಸರು | : | ಸಂಗಪ್ಪ | ಚಾಸಾ-10 |
| ವಯಸ್ಸು | : | 60 ವರ್ಷ | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಕರಡಿ | |

ದಿನಾಂಕಃ 07-02-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.</u>**

ನಾನು ಸುಮಾರು 15-20 ವರ್ಷಗಳಿಂದ ಮಂಗಳೂರಿನಲ್ಲಿ ಕೂಲಿ ಕೆಲಸ ಮಾಡುತ್ತೇನೆ. 2 ನೇ ಆರೋಪಿ ಹಾಗೂ ಮೃತ ಬಸವರಾಜ ಪರಿಚಯವಿಲ್ಲ.

ಈಗ 3 ವರ್ಷಗಳ ಹಿಂದೆ ಊರಲ್ಲಿ ನಾನು ಕುಳಿತಾಗ ಪೋಲೀಸರು ಬಂದು ಪೋಟೋ ತೆಗೆದುಕೊಂಡರು. ಸದರಿ ಪೋಟೋವನ್ನು ಈಗಾಗಲೇ ನಿಪಿ-23 ಅಂತಾ ಗುರುತಿಸಲಾಗಿದೆ. ಪೋಟೋವನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆ ನನಗೆ ಗೊತ್ತಿಲ್ಲ. ನಿಪಿ-22 ಪಂಚನಾಮೆ ನೋಡಿದೆ ಅದರ ಮೇಲಿನ ಹೆಬ್ಬೆಟ್ಟಿನ ಸಹಿ ನನ್ನದೇ ಇರುತ್ತದೆ. ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ 2 ನೇ ಆರೋಪಿಯನ್ನು ವಿಚಾರಣೆ ಮಾಡಿಲ್ಲ. ಪೋಟೋ ಯಾವ ವಿಷಯಕ್ಕೆ ತೆಗೆದಿದ್ದಾರೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**<u>ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.</u>**

ದಿನಾಂಕಃ 21-06-2024 ರಂದು ಮಧ್ಯಾಹ್ನ 12.45 ಗಂಟೆಗೆ ನನ್ನನ್ನು ಹಾಗೂ ಚಾಸಾ-10 ಇವರನ್ನು ಇಳಕಲ್ ಗ್ರಾಮೀಣ ಪೊಲೀಸಠಾಣೆಗೆ ಕರೆಯಿಸಿ ಅಲ್ಲಿ ಆರೋಪಿ-2 ರನ್ನು ತೋರಿಸಿ ಬಸವರಾಜನ ಕೊಲೆ ವಿಚಾರವಾಗಿ ವಿಚಾರಿಸಿದಾಗ

ಆರೋಪಿ-2 ಇವಳು ಉಳಿದ ಆರೋಪಿತರೊಂದಿಗೆ ಸೇರಿ ಕೊಲೆ ಮಾಡಿದ ವಿಚಾರ ತಿಳಿಸಿ ತನ್ನೊಂದಿಗೆ ಬಂದರೆ ಕೊಲೆಗೆ ಸಂಚು ಮಾಡಿದ ಸ್ಥಳ ತೋರಿಸುವುದಾಗಿ ಹೇಳಿದಳು ಎನ್ನುವುದು ಸರಿಯಲ್ಲ. ನಮ್ಮನ್ನು ಹಾಗೂ ಅವಳನ್ನು ಸೇರಿ ತಾನು ಬಾಡಿಗೆ ಮನೆಯಲ್ಲಿ ವಾಸಿಸುತ್ತಿರುವ ಇಳಕಲ್ ಶಹರದ ಅಂಬೇಡ್ಕರ ಸರ್ಕಲ ಬಳಿ ಕರೆದುಕೊಂಡು ಬಂದು ಇದೇ ಸ್ಥಳದಲ್ಲಿ ಬಸವರಾನನ್ನು ಕೊಲೆ ಮಾಡಲು ಸಂಚು ಮಾಡಿದ ಸ್ಥಳ ಎಂದು ತೋರಿಸಿದಳು ಎನ್ನುವುದು ಸರಿಯಲ್ಲ. ಅವಳು ತೋರಿಸಿದ ಸ್ಥಳದಲ್ಲಿ 1.45 ರಿಂದ 2.35 ಗಂಟೆವರೆಗೆ ನಮ್ಮ ಸಮಕ್ಷಮ ಪಂಚನಾಮೆ ಜರುಗಿಸಿ ನನ್ನ ಹೆಬ್ಬೆಟ್ಟಿನ ಗುರುತು ಹಾಗೂ ಚಾಸಾ-9 ರವರ ಸಹಿ ಪಡೆದಿದ್ದಾರೆ ಎನ್ನುವುದು ಸರಿಯಲ್ಲ. ಪಂಚನಾಮೆ ಕುರಿತು ನಿಪಿ-23 ರಂತೆ ಪೋಟೋ ತೆಗೆದಿದ್ದಾರೆ ಎನ್ನುವುದು ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

07-02-2026
ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.

S.C. 53/2024.

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.

## <u>ಸತ್ರ ಮೊಕದ್ದಮೆ ಸಂಖ್ಯೆ: 53/2024.</u>

| | | | |
|---|---|---|---|
| ಹೆಸರು | : | ಸಿದ್ದಪ್ಪ ವಾಲೀಕಾರ | ಫ್ರಾಸಾ-08 |
| ತಂದೆಯ ಹೆಸರು | : | ಮಲ್ಲಪ್ಪ | ಚಾಸಾ-09 |
| ವಯಸ್ಸು | : | 55 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಕರಡಿ | |

ದಿನಾಂಕಃ 07-02-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.</u>**

ಆರೋಪಿ-2 ಪರಿಚಯ. ಮೃತ ಬಸವರಾಜ ಆರೋಪಿ-2 ರ ಗಂಡ ಒಂದು ವರ್ಷದ ಹಿಂದೆ ತೀರಿಕೊಂಡಿದ್ದ. ಪೊಲೀಸರು ಬಸವರಾಜನ ಮನೆ ಮುಂದೆ ನನ್ನ ಸಹಿ ಪಡೆದಿದ್ದಾರೆ. ಅದನ್ನು ನಿಪಿ-22 ಅಂತಾ, ಸಹಿಯನ್ನು ನಿಪಿ-22(ಎ) ಅಂತಾ ಗುರುತಿಸಲಾಯಿತು. ಸ್ಥಳದಲ್ಲಿ ಒಂದು ಪೋಟೋ ತೆಗೆದಿದ್ದು ಅದನ್ನು ನಿ(-23 ಅಂತಾ ಗುರುತಿಸಲಾಯಿತು. ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ 2 ನೇ ಆರೋಪಿಯನ್ನು ವಿಚಾರಣೆ ಮಾಡಿಲ್ಲ. ಪೋಟೋ ಯಾವ ವಿಷಯಕ್ಕೆ ತೆಗೆದಿದ್ದಾರೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**<u>ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.</u>**

ದಿನಾಂಕಃ 21-06-2024 ರಂದು ಮಧ್ಯಾಹ್ನ 12.45 ಗಂಟೆಗೆ ನನ್ನನ್ನು ಹಾಗೂ ಚಾಸಾ-10 ಇವರನ್ನು ಇಳಕಲ್ ಗ್ರಾಮೀಣ ಪೊಲೀಸಠಾಣೆಗೆ ಕರೆಯಿಸಿ ಅಲ್ಲಿ ಆರೋಪಿ-2 ರನ್ನು ತೋರಿಸಿ ಬಸವರಾಜನ ಕೊಲೆ ವಿಚಾರವಾಗಿ ವಿಚಾರಿಸಿದಾಗ ಆರೋಪಿ-2 ಇವಳು ಉಳಿದ ಆರೋಪಿತರೊಂದಿಗೆ ಸೇರಿ ಕೊಲೆ ಮಾಡಿದ ವಿಚಾರ ತಿಳಿಸಿ ತನ್ನೊಂದಿಗೆ ಬಂದರೆ ಕೊಲೆಗೆ ಸಂಚು ಮಾಡಿದ ಸ್ಥಳ ತೋರಿಸುವುದಾಗಿ ಹೇಳಿದಳು

ಎನ್ನುವುದು ಸರಿಯಲ್ಲ. ನಮ್ಮನ್ನು ಹಾಗೂ ಅವಳನ್ನು ಸೇರಿ ತಾನು ಬಾಡಿಗೆ ಮನೆಯಲ್ಲಿ ವಾಸಿಸುತ್ತಿರುವ ಇಳಕಲ್ ಶಹರದ ಅಂಬೇಡ್ಕರ ಸರ್ಕಲ ಬಳಿ ಕರೆದುಕೊಂಡು ಬಂದು ಇದೇ ಸ್ಥಳದಲ್ಲಿ ಬಸವರಾನನ್ನು ಕೊಲೆ ಮಾಡಲು ಸಂಚು ಮಾಡಿದ ಸ್ಥಳ ಎಂದು ತೋರಿಸಿದಳು ಎನ್ನುವುದು ಸರಿಯಲ್ಲ. ಅವಳು ತೋರಿಸಿದ ಸ್ಥಳದಲ್ಲಿ 1.45 ರಿಂದ 2.35 ಗಂಟೆವರೆಗೆ ನಮ್ಮ ಸಮಕ್ಷಮ ಪಂಚನಾಮೆ ಜರುಗಿಸಿ ನಿಪಿ-22(ಎ) ರಂತೆ ನನ್ನ ಹಾಗೂ ಚಾಸಾ-10 ರವರ ಸಹಿಗಳನ್ನು ಪಡೆದಿದ್ದಾರೆ ಎನ್ನುವುದು ಸರಿಯಲ್ಲ. ಪಂಚನಾಮೆ ಕುರಿತು ನಿಪಿ-23 ರಂತೆ ಪೋಟೋ ತೆಗೆದಿದ್ದಾರೆ ಎನ್ನುವುದು ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

07-02-2026
ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.